# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ:ಪಿಎಸ್‌ಸಿ 266 ಆರ್‌ಟಿಬಿ(2)/2023-24/3045

ಲೋಕ ಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:14-12-2023.

ಇವರಿಂದ:-

**ಕಾರ್ಯದರ್ಶಿ,**
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು-560001.

**"ನೆನಪೋಲೆ"**

ಇವರಿಗೆ:-

**ಆಯುಕ್ತರು,**
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, ಬಿ.ಎಂ.ಟಿ.ಸಿ. ಸಂಕೀರ್ಣ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-560 027.

ಮಾನ್ಯರೆ,

**<u>ವಿಷಯ</u>**:- ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಮೋಟಾರು ವಾಹನ ನಿರೀಕ್ಷಕರು 70+06(ಹೈಕ) ಹುದ್ದೆಗಳ ನೇಮಕಾತಿ ಸಂಬಂಧ

**<u>ಉಲ್ಲೇಖ</u>**:1.ತಮ್ಮ ಪತ್ರ ಸಂಖ್ಯೆ: ಸಾಆ/ಸಿಬ್ಬಂದಿ-04/ವೈವ-142/2020-21, ದಿ:04-08-2023
2.ಆಯೋಗದ ಪತ್ರ ಸಂ: ಪಿಎಸ್‌ಸಿ 266 ಆರ್‌ಟಿಬಿ-2/23-24, ದಿ:31-10-2023

* * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮ್ಮ ಇಲಾಖೆಯಲ್ಲಿ ಖಾಲಿಯಿರುವ ಮೋಟಾರು ವಾಹನ ನಿರೀಕ್ಷಕರು 70+06(ಹೈಕ) ಹುದ್ದೆಗಳ ನೇಮಕಾತಿ ಸಂಬಂಧ ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಸದರಿ ಹುದ್ದೆಗೆ ನಿಗದಿಪಡಿಸಿರುವ ವಾಹನಾ ಚಾಲನಾ ಪರವಾನಗಿಯ ವಿವರಗಳನ್ನು API ತಂತ್ರಾಂಶದ ಮುಖಾಂತರ ಪಡೆಯುವ ಬಗ್ಗೆ ವ್ಯವಸ್ಥೆ ಮಾಡುವಂತೆ ಹಾಗೂ ತೃತೀಯ ಲಿಂಗಿಗಳಿಗೆ ಯಾವ ದೇಹದಾರ್ಢ್ಯತೆಯ ಮಾನದಂಡವನ್ನು ಅನುಸರಿಸಬೇಕು ಎಂಬ ಸ್ಪಷ್ಟೀಕರಣದೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಆನ್‌ಲೈನ್ ಪೋರ್ಟಲ್ ಮೂಲಕ ದೃಢೀಕೃತ ನಮೂನೆ-06 ರೊಂದಿಗೆ ಸಲ್ಲಿಸುವಂತೆ ಆಯೋಗದ ದಿ:31-10-2023ರ ಪತ್ರದಲ್ಲಿ ಕೋರಲಾಗಿತ್ತು.

ಆದರೆ ಇದುವರೆವಿಗೂ ತಮ್ಮಿಂದ ಯಾವುದೇ ಮಾಹಿತಿಯು ಸ್ವೀಕೃತವಾಗಿರುವುದಿಲ್ಲವಾದ್ದರಿಂದ ಕೋರಿರುವ ಸ್ಪಷ್ಟೀಕರಣದೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಆನ್‌ಲೈನ್ ಪೋರ್ಟಲ್ ಮೂಲಕ ದೃಢೀಕೃತ ನಮೂನೆ-06 ರೊಂದಿಗೆ ಸಲ್ಲಿಸುವಂತೆ ಮತ್ತೊಮ್ಮೆ ತಮ್ಮನ್ನು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

**ಸಹಿ/-**
ಸಹಾಯಕ ಕಾರ್ಯದರ್ಶಿ(ಪ್ರ),
ಕರ್ನಾಟಕ ಲೋಕಸೇವಾ ಆಯೋಗ.

ಪ್ರತಿ ಮಾಹಿತಿಗಾಗಿ:-

ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಯವರಿಗೆ(ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು), ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.